Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD



Rtn. Francesco Arezzo
R.I. President



Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 12

ದಿನಾಂಕ: 23.09.2025



Rtn. Anil Kumar
President



Rtn. Krishnappa
Secretary

## ರೊ. ಸ್ಮಿತಾ ಕಾಮತ್ ರಿಂದ ಶಿಕ್ಷಕವೃಂದಕ್ಕೆ 21ನೇ ಶತಮಾನದ ಕೌಶಲ್ಯಗಳ ತರಬೇತಿ ಕಾರ್ಯಾಗಾರ




ರೋಟರಿ ಐಸಿರಿ ಹಾಗೂ ಶ್ರೀ ಶಾರದಾ ಟೀಚರ್ಸ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಮಣಿಪಾಲ ಇವರ ಸಹಭಾಗಿತ್ವದಲ್ಲಿ ಸೆಪ್ಟೆಂಬರ್ 19ರ ಶುಕ್ರವಾರದಂದು ಶ್ರೀ ಶಾರದಾ ಟೀಚರ್ಸ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಆವರಣದಲ್ಲಿ "ಶಿಕ್ಷಕರಿಗೆ 21ನೇ ಶತಮಾನದ ಕೌಶಲ್ಯಗಳು" ಎನ್ನುವ ವಿಷಯದಲ್ಲಿ ತರಬೇತಿ ಕಾರ್ಯಗಾರವು ನಡೆಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ವಲಯ ಸೇನಾನಿ ರೊ. ಸ್ಮಿತಾ ಕಾಮತ್ ರವರು ಶಿಕ್ಷಕರಿಗೆ ಅವಶ್ಯಕವಾಗಿ ಬೇಕಾಗುವ 4C ಗಳ ಅಂದರೆ ಕ್ರಿಟಿಕಲ್ ಥಿಂಕಿಂಗ್, ಕ್ರಿಯೇಟಿವಿಟಿ, ಕಮ್ಯುನಿಕೇಷನ್ ಮತ್ತು ಕೊಲಾಬರೇಷನ್ ಬಗ್ಗೆ ವಿವರಿಸುತ್ತಾ ಹೇಗೆ ವಿಮರ್ಶಾತ್ಮಕ ಚಿಂತನೆ ಮತ್ತು ಸೃಜನಶೀಲತೆಯಿಂದ ಸಂವಹನ ನಡೆಸಿ ಎಲ್ಲರ ಸಹಯೋಗದೊಂದಿಗೆ ವಿದ್ಯಾರ್ಥಿಗಳ ಸಾಮರ್ಥ್ಯವರ್ಧನೆ ಮಾಡಲು ಸಾಧ್ಯ ಎಂದು ವಿವರಿಸಿದರು.

ಆರಂಭದಲ್ಲಿ ಶ್ರೀ ಶಾರದಾ ಟೀಚರ್ಸ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಪ್ರಾಂಶುಪಾಲೆ ಶ್ರೀಮತಿ ಸುನೀತಾರವರು ಪ್ರಾಸ್ತಾವಿಕವಾಗಿ ಮಾತನಾಡಿ, ಅತಿಥಿಗಳನ್ನು ಸ್ವಾಗತಿಸಿದರು. ರೋಟರಿ ಜಿಲ್ಲಾ ಆರ್.ಸಿ.ಸಿ ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್ ಉಪಸ್ಥಿತರಿದ್ದರು. 25 ಶಿಕ್ಷಕರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

## "ಸದೃಢ ಆರ್. ಸಿ. ಸಿ. ಇಂದಿನ ಅಗತ್ಯ" ಸಂಗಮ-2025ರಲ್ಲಿ ರೊ. ಗುರುಪ್ರಸಾದ್ ಕಾಮತ್



ಅಂತಾರಾಷ್ಟ್ರೀಯ ಮಟ್ಟದಲ್ಲಿ ರೋಟರಿಯು ಸೇವಾ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರೂ, ರೋಟರಿಯ ಮೂಲಧ್ಯೇಯ ಸ್ನೇಹ ಮತ್ತು ಒಡನಾಟವಾಗಿದ್ದು, ರೋಟರಿಯ ಅಂಗವಾದ ಸಮುದಾಯದಳವು ಸಹ ಇದೇ ಗುರಿಯಿಟ್ಟು ಕೆಲಸ ಮಾಡಬೇಕಿದೆ. ಸಾಂಸ್ಕೃತಿಕ ಸ್ಪರ್ಧೆಗಳು ಭಾವನೆಗಳ ಮಿಲನಕ್ಕೊಂದು ಸಂಗಮ ಸ್ಥಾನವಾಗಿದ್ದು, ಈ ಒಡನಾಟದಿಂದ ಒಂದಾಗಿ ಸಂತೋಷಪಡಲು ಸಾಧ್ಯ. RCC ಯು ರೋಟರಿ ಮತ್ತು ನಮ್ಮ ಸುತ್ತಲಿನ ಸಮುದಾಯಕ್ಕೆ ಕೊಂಡಿ ಅಗಿ, ಜನರ ನಿತ್ಯ ಜೀವನದ ಸಮಸ್ಯೆಗಳನ್ನು ಗುರುತಿಸಿ ರೋಟರಿಯ ಸಹಕಾರದೊಂದಿಗೆ ಸಮಾಜಮುಖಿ ಕೆಲಸದಲ್ಲಿ ತೊಡಗಿಸಿಕೊಂಡು ಮತ್ತು ತಾವೇ ಕೆಲವು ಸಣ್ಣ ಸಣ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸದೃಢ RCC ಎನಿಸಿಕೊಳ್ಳಬೇಕು ಎಂದು ರೋಟರಿ ಜಿಲ್ಲಾ ಆರ್.ಸಿ.ಸಿ. ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್ ಕರೆ ನೀಡಿದರು. ಅವರು ಸೆಪ್ಟೆಂಬರ್ 21ರಂದು ಕೋಟೇಶ್ವರದಲ್ಲಿ ನಡೆದ ರೋಟರಿ ಜಿಲ್ಲೆ 3182ರ ವಲಯ 2ರ ರೋಟರಿ ಸಮುದಾಯದಳದ ಸಾಂಸ್ಕೃತಿಕ ಸ್ಪರ್ಧೆ RCC FEST "ಸಂಗಮ 2025" ಉದ್ಘಾಟಿಸಿ ಮಾತನಾಡುತ್ತಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ರೋಟರಿ ಕ್ಲಬ್ ಕೋಟೇಶ್ವರದ ಅಧ್ಯಕ್ಷರಾದ ರೊ. ವಿಜಯ್ ಕುಮಾರ್ ಶೆಟ್ಟಿ ವಹಿಸಿದ್ದರು. ವಲಯ 2ರ ಸಹಾಯಕ ಗವರ್ನರ್ ರೊ. ಶ್ಯಾಮಸುಂದರ ನಾಯರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



## ಪ್ರೇರಣಾ ಸಿರಿ

### ವೃತ್ತಿ, ವ್ಯಾಪಾರ, ಉದ್ಯೋಗ – ಇದರಲ್ಲಿ ಶ್ರೇಷ್ಠ ಯಾವುದು ?

**– ರೊ. ಸುಕೇಶ್ ಕುಂದರ್**

ಜೀವನ ನಿರ್ವಹಣೆಗೆ ವಿವಿಧ ವೃತ್ತಿ / ವ್ಯಾಪಾರ / ಉದ್ಯೋಗಗಳನ್ನು ಮಾಡುವವರು, ಈಗಿನ ದಿನಮಾನಗಳಲ್ಲಿ ತಮ್ಮದೇ ಶ್ರೇಷ್ಠ "ನಾವಿಲ್ಲದಿದ್ದರೆ ಇತರರ ಜೀವನ ತುಂಬಾ ಕಷ್ಟ" ಅಂತ ಹೇಳುವವರಿದ್ದಾರೆ !

ಇರಲಿ, ಅದು ಅವರವರ ವಿವೇಚನೆಗೆ ಬಿಟ್ಟದ್ದು. ಆದರೆ ಈಗಿನ ಕಾಲದಲ್ಲಿ ವೃತ್ತಿ / ವ್ಯಾಪಾರ / ಹುದ್ದೆಗಳ ಮೌಲ್ಯ, ಕಾಳಜಿ, ಮಹತ್ವವನ್ನು ಮರೆತು, ಹಣ ಒಂದೇ ಜೀವನ.... ಎಲ್ಲವೂ ಹಣದಿಂದಲೇ..... ಅಂತ ತಿಳಿದವರಿಂದ, ಇವರು ಮಾಡುವ ಕೆಲಸಗಳ ಬಗ್ಗೆ ಜನರು ಸಂಶಯ ಮತ್ತು ಬೇಸರದಿಂದ ನೋಡುವಂತಾಗಿದೆ.

ಹಿಂದೆ ಒಂದು ಕಾಲವಿತ್ತು... ಆಗ ಸಂಬಂಧ ಕೇವಲ ಪ್ರಾಮಾಣಿಕತೆಯಿಂದ, ಎಲ್ಲರೂ ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ, ಎಲ್ಲಾ ವರ್ಗದ ಜನರೊಂದಿಗೆ ಪ್ರೀತಿಯಿಂದ ಜೀವನ ನಿರ್ವಹಿಸುವುದರಲ್ಲಿತ್ತು.

ಈಗ ಎಲ್ಲಾ ಬದಲಾಗಿ ಹೋಗಿದೆ. ಈಗ ತಮ್ಮ ವೃತ್ತಿಯಲ್ಲಿ, ವ್ಯಾಪಾರದಲ್ಲಿ ತಮ್ಮ ಕುಟುಂಬ ಐಷಾರಾಮಿ ಜೀವನ ನಡೆಸಿದರೆ ಸಾಕು, ಎದುರಿಗೆ ಇರುವವನ ದುಃಖ, ಕಷ್ಟ, ನೋವು ನಮಗೆ ಅಗತ್ಯ ಇಲ್ಲ ಅನ್ನುವವರೇ ಜಾಸ್ತಿ.

ಯಾವ ವ್ಯಕ್ತಿ ತನ್ನ ವೃತ್ತಿ / ವ್ಯಾಪಾರ / ಹುದ್ದೆಗಳನ್ನು ತಾಳ್ಮೆ, ಗೌರವ, ಪ್ರಾಮಾಣಿಕತೆ, ಸತ್ಯ, ಮಾನವೀಯತೆ, ಪ್ರೀತಿ ಕರುಣೆಯಿಂದ ನಿರ್ವಹಿಸಿಕೊಂಡು ಹೋಗುತ್ತಾ, ತಾನು ನ್ಯಾಯಯುತವಾಗಿ ಸಂಪಾದಿಸಿದುದರಲ್ಲಿ ಸ್ವಲ್ಪ ಅಂಶವನ್ನು ಸಮಾಜದ ಅಗತ್ಯವಿರುವ ಜನರಿಗೆ ಕೊಟ್ಟು ಅವರ ಬಾಳಹಾದಿಯನ್ನು ಸುಗಮಗೊಳಿಸಿ, ಒಳ್ಳೆಯ ನಾಗರಿಕರನ್ನಾಗಿ ಮಾಡಿ, ಸಧೃಢ ಸಮಾಜ ನಿರ್ಮಿಸುವಂತೆ ಮಾಡುವಲ್ಲಿ ಶ್ರಮಿಸುತ್ತಾನೋ, ನಾನೇ... ನನ್ನದೇ... ನನ್ನಿಂದಲೇ ಎನ್ನುವ ಅಹಂ ಬಿಟ್ಟು ಸಾಮಾನ್ಯ ಜನರೊಂದಿಗೆ ಬೆರೆಯುವವನೋ, ಅವನೇ ಶ್ರೇಷ್ಠ. ಅವನು ಮಾಡುವ ವೃತ್ತಿಯೂ ಶ್ರೇಷ್ಠ, ಅವನು ಮಾಡುವ ವ್ಯಾಪಾರವೂ ಶ್ರೇಷ್ಠ ... ಅವನು ಮಾಡುವ ಉದ್ಯೋಗವೂ ಶ್ರೇಷ್ಠ...!



ಸೆಪ್ಟೆಂಬರ್ 17ರಂದು ಮಣಿಪಾಲದ ಶ್ರೀ ಶಾರದಾ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಮತ್ತು ಭಾರತ್ ಸೇವಕ್ ಸಮಾಜ್ ತ್ರಿವೇಂಡ್ರಮ್ ಆಶ್ರಯದಲ್ಲಿ ನಡೆದ Cooking without fire ಸ್ಪರ್ಧೆಯಲ್ಲಿ ಗೌರವ ಅತಿಥಿಯಾಗಿ ಭಾಗವಹಿಸಿದ ನಮ್ಮ ಸದಸ್ಯೆ, Conference Promotion ವಲಯಾಧಿಕಾರಿ ರೊ. ಗೀತಾಶ್ರೀ ಎಂ. ಉಪಾಧ್ಯರವರು.



ಕರ್ನಾಟಕ ಪಬ್ಲಿಕ್ ಸ್ಕೂಲ್ ಬ್ರಹ್ಮಾವರ, ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೇವಾಯೋಜನೆಯ ಕ್ಯಾಂಪ್ ನಲ್ಲಿ ನಮ್ಮ ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ವಿದ್ಯಾರ್ಥಿಗಳಿಗೆ "ನಮ್ಮ ಸೇನೆ ನಮ್ಮ ಹೆಮ್ಮೆ" ಎಂಬ ವಿಷಯದಲ್ಲಿ ಪ್ರೇರಕ ಭಾಷಣ ಮಾಡಿದರು. NSS ವಿಭಾಗಾಧಿಕಾರಿ ಶ್ರೀಮತಿ ಸುನೀತಾ ಎಮ್ರಾಳ್ ಅವರು ರೊ.ಕೃಷ್ಣಪ್ಪರನ್ನು ಸನ್ಮಾನಿಸಿದರು. ಹೆಗ್ಗುಂಜೆ ಗ್ರಾಮ ಪಂಚಾಯತ್ ಸದಸ್ಯರಾದ ಪ್ರವೀಣ್ ಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.




22/9/2025 ರಂದು ಶಿವಪ್ರೇರಣ ಚಾರಿಟಬಲ್ ಟ್ರಸ್ಟ್ ಮತ್ತು ಕಲ್ಲಚ್ಚು ಪ್ರಕಾಶನದ ವತಿಯಿಂದ "ರತ್ನ ಸಂಜೀವ" ಸರಳೇಬೆಟ್ಟು ಇಲ್ಲಿ ನಡೆದ ಕವಿಗೋಷ್ಠಿ "ನವರಸಗಳಲ್ಲಿ ನವರಾತ್ರಿ" ಎಂಬ ಕಾರ್ಯಕ್ರಮದಲ್ಲಿ ನಮ್ಮ ಸದಸ್ಯೆ, ವಲಯ ಸೇನಾನಿ ರೊ. ಸ್ಮಿತಾ ಕಾಮತ್ ಅವರನ್ನು ಅವರು ಸಾಹಿತ್ಯಕ್ಕೆ ನೀಡಿದ ಕೊಡುಗೆಗಾಗಿ ಸನ್ಮಾನಿಸಲಾಯಿತು.

## ಬೌದ್ಧಿಕ ಸಿರಿ

ಪ್ರಾಥಮಿಕ ಶಾಲೆಯ ಒಂದು ಪ್ರವಾಸದ ಸಮಯದಲ್ಲಿ ಐಷಾರಾಮಿ ವಿಹಾರ ನೌಕೆಯನ್ನು ನೋಡಿದ ಆ ಬಾಲಕನಿಗೆ ತಾನೂ ಸಹ ಒಂದು ದಿನ ಕ್ರ್ಯೂಸ್ ಶಿಪ್ ನಲ್ಲಿ ಪ್ರಯಾಣಿಸಬೇಕೆಂಬ ಕನಸು ಮೊಳಕೆಯೊಡೆದಿತ್ತು.

ಕಲಿತು, ದೊಡ್ಡವನಾಗಿ ಒಂದು ಉದ್ಯೋಗಕ್ಕೆ ಸೇರಿದಾಗ ಈತ ಕಷ್ಟಪಟ್ಟು ದುಡಿದು ಪ್ರತಿ ತಿಂಗಳು ಸ್ವಲ್ಪ ಸ್ವಲ್ಪ ಹಣವನ್ನು ಈ ಉದ್ದೇಶಕ್ಕಾಗಿ ಕೂಡಿಡಲಾರಂಭಿಸಿದ. ಒಮ್ಮೆ ಈ ಕ್ರ್ಯೂಸ್ ಶಿಪ್ ಪ್ರಯಾಣದ ವೆಚ್ಚವು ತನ್ನ ಉಳಿತಾಯದ ಹಣಕ್ಕೆ ಹೊಂದಿಕೆಯಾದಾಗ, ಈತನು ಕ್ರ್ಯೂಸ್ ಪ್ರಯಾಣದ ಟಿಕೇಟನ್ನು ಖರೀದಿಸಿದ.

ಕ್ರ್ಯೂಸ್ ಶಿಪ್ ತನ್ನೂರ ಸಮೀಪದ ಬಂದರಿಗೆ ಬಂದಾಗ, ಬಹಳ ಸಂತೋಷದಿಂದ ತನ್ನ ಲಗ್ಗೇಜುಗಳೊಂದಿಗೆ ಈತ ಪ್ರಯಾಣ ಆರಂಭಿಸಿದ.

ಹಲವಾರು ದಿನಗಳ ಪ್ರವಾಸ ಮುಗಿಸಿದ ನಂತರ ಈತನಿದ್ದ ಐಷಾರಾಮಿ ವಿಹಾರ ನೌಕೆ ವಾಪಸ್ ಬಂದಾಗ ಎಲ್ಲರನ್ನೂ ಹಡಗಿನ ಸಿಬ್ಬಂದಿಯವರು ಮಾತನಾಡಿಸಿ, ಆತ್ಮೀಯವಾಗಿ ಬೀಳ್ಕೊಡುತ್ತಿದ್ದರು.

ಈತನೂ ಹಡಗಿನಿಂದ ಇಳಿಯುವಾಗ, ಸಿಬ್ಬಂದಿಗಳು ಈತನೊಂದಿಗೆ ವಿಚಾರಿಸಿ, ತಾವು ಎಲ್ಲಾ ಪ್ರಯಾಣಿಕರೊಂದಿಗೂ ಪ್ರತೀದಿನ ಉಪಹಾರ ಮತ್ತು ಭೋಜನದ ಸಮಯದಲ್ಲಿ ಮಾತನಾಡುತ್ತಿದ್ದೆವು, ನೀವೆಂದೂ ಸಹ ನಮಗೆ ಸಿಗಲಿಲ್ಲ, ಏನು ವಿಷಯ ಎಂದು ಕೇಳಿದರು.

ಅದಕ್ಕೆ ಈತನು ನಾನು ಬಹಳ ಕಷ್ಟಪಟ್ಟು ಟಿಕೇಟಿಗೆ ಆಗುವಷ್ಟು ಹಣವನ್ನು ಮಾತ್ರ ಹೊಂದಿಸಿದ್ದೆ. ಹಡಗಿನ ಊಟೋಪಚಾರಗಳು ದುಬಾರಿಯಲ್ಲವೇ, ಅದಕ್ಕಾಗಿ ನಾನು ಯಾವುದೇ ಊಟೋಪಚಾರಕ್ಕೆ ಬರಲಿಲ್ಲ. ಬದಲಾಗಿ, ನಾನು ಬರುವಾಗ ಸ್ವಲ್ಪ ಬ್ರೆಡ್ ಮತ್ತು ಬಿಸ್ಕೆಟ್ ಇತ್ಯಾದಿಗಳನ್ನು ತಂದಿದ್ದೆ. ಅದನ್ನೇ ತಿನ್ನುತ್ತಾ ಇಷ್ಟು ದಿನ ಕಳೆದೆ ಎಂದನು.

ಆಗ ಹಡಗಿನ ಕ್ಯಾಪ್ಟನ್, ನಿನ್ನ ಟಿಕೇಟಿನ ದರದಲ್ಲಿಯೇ ಊಟೋಪಚಾರವೂ ಸೇರಿದಂತೆ ಎಲ್ಲಾ ಖರ್ಚು ವೆಚ್ಚಗಳೂ ಒಳಗೊಂಡಿತ್ತು. ನೀನು ಈ ಬಗ್ಗೆ ಮೊದಲೇ ಯಾಕೆ ವಿಚಾರಿಸಲಿಲ್ಲ ಎಂದನು.

ಜೀವನದಲ್ಲಿ ಹಲವಾರು ಸಂದರ್ಭಗಳಲ್ಲಿ ನಾವೂ ಸಹ ಹೀಗೆಯೇ, ಸರಿಯಾಗಿ ಕೇಳಲು ಸಂಕೋಚಪಟ್ಟು, ಸಿಕ್ಕ ಹಲವಾರು ಅವಕಾಶಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ವಿಫಲರಾಗುತ್ತೇವೆ.

ಹಾಗಾಗಬಾರದಲ್ಲವೇ....?

## Engineers' Day celebration




ಇಂಜಿನಿಯರ್ಸ್ ಡೇ ಪ್ರಯುಕ್ತ ರೋಟರಿ ಐಸಿರಿಯ ಎಂಜಿನಿಯರ್ ಹಿನ್ನೆಲೆಯ ಸದಸ್ಯರಾದ Past AG MPHF ಎ. ಗಣೇಶ, ರೊ. ಕೆ. ಪ್ರಭಾಕರ್ ಶೆಟ್ಟಿ, ರೊ. ಪಾಂಡುರಂಗ ಪಿ. ಲಾಗ್ವಾಂಕರ್, ರೊ. ಸುನಿಲ್ ಕುಮಾರ್ ಹಾಗೂ ರೊ. ರಾಜೇಶ್ ಡಿ. ಶೆಣೈ ಯವರನ್ನು ಅಧ್ಯಕ್ಷರು ಗುರುತಿಸಿ ಅಭಿನಂದಿಸಿದರು.

## ಸೆಪ್ಟೆಂಬರ್ 16ರ ಸಭೆಯ ಝಲಕ್















## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 11ನೇ ವಾರದ ಸಭೆಯು ತಾರೀಖು 16/9/2025ರಂದು RCC ಕಾರ್ಯಾಲಯದಲ್ಲಿ ನಡೆಯಿತು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಕೊರಳ ಲಾಂಛನ ತೊಡಿಸಿ, ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಮಂಜುನಾಥ ಉಪಾಧ್ಯ ಪ್ರಾರ್ಥನೆ ನಡೆಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು.

ಜೊತೆಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಅವರು ಕಳೆದ ವಾರದ ವರದಿಯನ್ನು ಮಂಡಿಸಿದರು. ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಸುದರ್ಶನ್ ಪೈ ಅವರು ಬಿಡುಗಡೆ ಮಾಡಿದರು. ಸಂಪಾದಕ ರೊ ರಾಜೇಶ್ ಡಿ ಶೆಣೈ ಸಹಕರಿಸಿದರು.

ರೊ ಸುದರ್ಶನ್ ಪೈ ಅವರು ಇಂದಿನ Engineer's Day ಆಚರಣೆ ಪ್ರಯುಕ್ತ sir M ವಿಶ್ವೇಶ್ವರಯ್ಯ ಅವರ ಬಗ್ಗೆ ಮಾತನಾಡಿದರು. ಜೊತೆಗೆ "ಜ್ಞಾನಸಿರಿ"ಯಲ್ಲಿ ಎಲ್ಲರ ಜೊತೆಗೂಡಿ ಕೆಲಸ ಮಾಡಿದ್ದು ಒಂದು ಒಳ್ಳೆ ಅವಕಾಶ ಎಂದರು.

ರೊ. ರಾಜೇಶ್ ಶೆಣೈ ಅವರು ವಾರದ ಬುಲೆಟಿನ್ ಗಾಗಿ ಹೆಚ್ಚು ಲೇಖನಗಳನ್ನು ಮಾಹಿತಿಗಳನ್ನು ನೀಡಿ ಸಹಕರಿಸಬೇಕೆಂದರು.

ರೋಟರಿ ಐಸಿರಿಯ Engineer ಸದಸ್ಯರಾದ ರೊ. ಎ. ಗಣೇಶ, ರೊ. ಪ್ರಭಾಕರ ಶೆಟ್ಟಿ, ರೊ. ಪಾಂಡುರಂಗ ಲಾಗ್ವಾಂಕರ್, ರೊ. ಸುನಿಲ್ ಕುಮಾರ್ ಹಾಗೂ ರೊ. ರಾಜೇಶ್ ಶೆಣೈ ಇವರನ್ನು ಅಧ್ಯಕ್ಷರು ಗುರುತಿಸಿ ಅಭಿನಂದಿಸಿದರು.

ರೊ. ಸುನಿಲ್ ಕುಮಾರ್ ಅವರು Engineer ವೃತ್ತಿಯ ಪ್ರಾಮುಖ್ಯತೆಯ ಬಗ್ಗೆ ಮಾತನಾಡಿದರು. ಅಲ್ಲದೆ "ಜ್ಞಾನಸಿರಿ"ಗೆ ಆಗಮಿಸಿದ ವಿದ್ಯಾರ್ಥಿಗಳ ನಿಖರ ಲೆಕ್ಕವನ್ನು ಮಂಡಿಸಿದರು.

ರೊ. ಪಾಂಡುರಂಗ ಲಾಗ್ವಾಂಕರ್ ಮಾತನಾಡಿ Engineer's day ಯ ವೈಶಿಷ್ಟ್ಯವನ್ನು ವಿವರಿಸಿದರು. ರೊ. ಎ. ಗಣೇಶ ಮಾತನಾಡಿ ವೃತ್ತಿಯಲ್ಲಿರಬೇಕಾದ ನೈತಿಕತೆಯನ್ನು ವಿವರಿಸಿದರು. ರೊ. ಸುಕೇಶ್ ಕುಂದರ್ ಎಲ್ಲ ವೃತ್ತಿಯಲ್ಲಿರಬೇಕಾದ ನಂಬಿಕೆಗೆ ಅರ್ಹ ವರ್ತನೆಯಿಂದ ನಮ್ಮನ್ನು ಜನ ಗುರುತಿಸಬೇಕು ಎಂದರು.

ರೊ. ಸ್ಮಿತಾ ಕಾಮತ್ ಮಾತನಾಡಿ ಮುಂದಿನ ದಿನಗಳಲ್ಲಿ designated month ನ ಕಾರ್ಯಕ್ರಮಗಳು ಸಮಯೋಚಿತವಾಗಿ ನಡೆಯಲಿ ಎಂದರು. ರೊ. ನಾಗರಾಜ್ ಮಾತನಾಡಿ "ಜ್ಞಾನಸಿರಿ"ಯಲ್ಲಿ ಊಟದ ವಿಷಯದಲ್ಲಿ ಆದ ತುರ್ತನ್ನು ಹೇಗೆ ನಿಭಾಯಿಸಬಹುದಿತ್ತು ಎಂದು ವಿವರಿಸಿದರು.

ಅಧ್ಯಕ್ಷರು, ರೊ. ಸುನಿಲ್ ಅವರ ಪತ್ನಿ Ann ರೂಪಾಶ್ರೀ ಇವರನ್ನು PhD ಮುಗಿಸಿದ್ದಕ್ಕಾಗಿ ಗುರುತಿಸಿದರು.

ಅಧ್ಯಕ್ಷರು ಮುಂಬರುವ ಸಾಂಸ್ಕೃತಿಕ ಸ್ಪರ್ಧೆಯ ತಯಾರಿ ಬಗ್ಗೆ ಸೂಚನೆ ನೀಡಿದರು. ರೊ. ಸುದರ್ಶನ್ ಪೈ ಅವರು ಅದೃಷ್ಟಶಾಲಿ ವ್ಯಕ್ತಿ ಆಯ್ಕೆ ಮಾಡಿದರು. ರೊ. ಪ್ರಭಾಕರ ಶೆಟ್ಟಿ ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಗೊಂಡರು. ಜೊತೆಕಾರ್ಯದರ್ಶಿ ಧನ್ಯವಾದ ಸಮರ್ಪಿಸಿದರು. ದಂಡಪಾಣಿ ಕೊರಳಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 11ನೇ ಸಂಚಿಕೆ ಬಿಡುಗಡೆ




ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ **ಹನ್ನೊಂದನೆ**ಯ ಆವೃತ್ತಿಯನ್ನು ನ್ಯಾಯವಾದಿ ರೊ. ಸುದರ್ಶನ್ ಎಸ್. ಪೈಯವರು 16/09/2025 ರಂದು ಬಿಡುಗಡೆ ಗೊಳಿಸಿದರು.



ರೋಟರಿ ಐಸಿರಿಯ ಹನ್ನೊಂದನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ಸುದರ್ಶನ್ ಎಸ್. ಪೈಯವರು ನಡೆಸಿದರು. ರೊ. ಕೆ. ಪ್ರಭಾಕರ ಶೆಟ್ಟಿ ಅವರು ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.



ಶ್ರೀಕೃಷ್ಣ ಜನ್ಮಾಷ್ಟಮಿಯ ಸಂದರ್ಭದಲ್ಲಿ ಹುಲಿವೇಷದಾರಿಯಾಗಿ ಕಾಣಿಸಿಕೊಂಡ ನಮ್ಮ ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್.